ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು.

**2022ರ ಪದವೀಧರ ಪ್ರಾಥಮಿಕ ಶಿಕ್ಷಕರ (6 ರಿಂದ 8 ನೇ ತರಗತಿ) ನೇಮಕಾತಿಗೆ ಸಂಬಂಧಿಸಿದಂತೆ ಆನ್‌ಲೈನ್ ಅರ್ಜಿ ಸಲ್ಲಿಸುವ ಸಂಬಂಧ ಅಭ್ಯರ್ಥಿಗಳು ಕೆಲವು ಪ್ರಶ್ನೆ/ಸ್ಪಷ್ಟನೆಗಳನ್ನು ಪದೇ ಪದೇ ಕೇಳಿರುತ್ತಾರೆ. ಅಭ್ಯರ್ಥಿಗಳಿಗೆ ಅನುಕೂಲಿಸುವ ಸಲುವಾಗಿ ಕೇಳಲಾದ ಪ್ರಶ್ನೆಗಳು/ಸ್ಪಷ್ಟನೆಗಳ ಬಗ್ಗೆ ಕೆಳಕಂಡಂತೆ ಮಾಹಿತಿ ನೀಡಿದೆ.**

| ಕ್ರ.ಸ | ಅಭ್ಯರ್ಥಿಗಳು ಕೇಳಿದ ಪ್ರಶ್ನೆಗಳು | ಈ ಕಛೇರಿಯ ಸ್ಪಷ್ಟನೆಗಳು |
|---|---|---|
| 01 | ವಿಕಲಚೇತನ ಅಭ್ಯರ್ಥಿಗಳು ವೈದ್ಯಕೀಯ ಮಂಡಳಿಯಿಂದ ಈಗಾಗಲೇ ಪಡೆದ ಪ್ರಮಾಣ ಪತ್ರ ಸಲ್ಲಿಸಬಹುದೇ? | ಚಾಲ್ತಿಯಲ್ಲಿರುವ ಪ್ರಮಾಣ ಪತ್ರಗಳನ್ನು ಸಲ್ಲಿಸಬಹುದು. |
| 02 | ನಾನು ಗ್ರಾಮೀಣ ಪ್ರಮಾಣ ಪತ್ರ ಮತ್ತು ಕನ್ನಡ ಮಾಧ್ಯಮ ಪ್ರಮಾಣ ಪತ್ರವನ್ನು ಈಗಾಗಲೇ ಪಡೆದುಕೊಂಡಿರುತ್ತೇನೆ. ಈಗ ಮತ್ತೊಮ್ಮೆ ಹೊಸದಾಗಿ ಪಡೆಯಬೇಕೆ? ಅಥವಾ ಈ ಹಿಂದೆ ಪಡೆದಿರುವ ಪ್ರಮಾಣ ಪತ್ರವನ್ನು ಸಲ್ಲಿಸಬಹುದೇ? | ಈಗಾಗಲೇ ಪಡೆದುಕೊಂಡಿರುವ ಪ್ರಮಾಣ ಪತ್ರಗಳನ್ನು ಸಲ್ಲಿಸಬಹುದು. ಆದರೆ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ ಪಡೆದ ಪ್ರಮಾಣ ಪತ್ರಗಳಿಗೆ ಬಿ.ಇ.ಓ ಕಛೇರಿಯ ಕೌಂಟರ್ ಸಹಿ (ಮೊಹರಿನೊಂದಿಗೆ) ಪಡೆದಿರಬೇಕು. ಅಭ್ಯರ್ಥಿಯು ತಾನು ಆನ್‌ಲೈನ್ ಅರ್ಜಿ ಸಲ್ಲಿಸುವ ದಿನಾಂಕದೊಳಗೆ ಪಡೆದಿರಬೇಕು. |
| 03 | ನಾನು ಸರ್ಕಾರಿ ನೌಕರಿಯಲ್ಲಿದ್ದೇನೆ, ಅಧಿಸೂಚನೆಯಲ್ಲಿ ನಿರಪೇಕ್ಷಣಾ ಪ್ರಮಾಣ ಪತ್ರವನ್ನು ಆನ್‌ಲೈನ್ ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಪಡೆದಿಟ್ಟುಕೊಂಡಿರಬೇಕು ಎಂದಿರುತ್ತದೆ. ಸರ್ಕಾರಿ ಆದೇಶದಂತೆ ಮೂಲದಾಖಲೆಗಳ ಪರಿಶೀಲನಾ ವೇಳೆಯಲ್ಲಿ ಸಲ್ಲಿಸಬಹುದೇ? | ಸರ್ಕಾರಿ ನೌಕರಿಯಲ್ಲಿರುವ ಅಭ್ಯರ್ಥಿಯು ಆನ್‌ಲೈನ್ ಅರ್ಜಿ ಸಲ್ಲಿಸುವ ವೇಳೆ ನಿರಪೇಕ್ಷಣಾ ಪ್ರಮಾಣ ಪತ್ರ ಲಭ್ಯವಿದ್ದಲ್ಲಿ ನಮೂದಿಸಬಹುದು. ಇಲ್ಲದಿದ್ದಲ್ಲಿ 1:2 ಪರಿಶೀಲನಾ ಪಟ್ಟಿಯಲ್ಲಿ ಆಯ್ಕೆಯಾದಲ್ಲಿ ಮೂಲದಾಖಲೆಗಳ ಪರಿಶೀಲನಾ ವೇಳೆ ಹಾಜರುಪಡಿಸಬಹುದು.<br>ಈ ಬಗ್ಗೆ ಆನ್‌ಲೈನ್ ಅರ್ಜಿಯಲ್ಲಿ ಕಡ್ಡಾಯಗೊಳಿಸಿಲ್ಲ. |
| 04 | ನಾನು 2ಎ ವರ್ಗಕ್ಕೆ ಸೇರಿದ ಅಭ್ಯರ್ಥಿಯಾಗಿದ್ದು ಶಿಕ್ಷಕರ ಅರ್ಹತಾ (CTET) ಪರೀಕ್ಷೆಯಲ್ಲಿ ಶೇ.55 ಅಂಕಗಳೊಂದಿಗೆ ಅರ್ಹತೆಯನ್ನು ಪಡೆದಿರುತ್ತೇನೆ ನಾನು ಜಿ.ಪಿ.ಟಿ ಹುದ್ದೆಗೆ ಅರ್ಜಿ ಸಲ್ಲಿಸಬಹುದೇ? | ಅವಕಾಶ ಇರುವುದಿಲ್ಲ.<br>2ಎ/2ಬಿ/3ಎ/3ಬಿ ಮತ್ತು ಸಾಮಾನ್ಯ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು CTET ಯಲ್ಲಿ ಕನಿಷ್ಠ ಶೇ.60 ರಷ್ಟು ಅಂಕಗಳೊಂದಿಗೆ ಅರ್ಹತೆ ಪಡೆದವರು ಹಾಗೂ ಪ.ಜಾತಿ/ಪ.ವರ್ಗ/ಪ್ರವರ್ಗ-1 ಮತ್ತು ವಿಕಲಚೇತನ ಅಭ್ಯರ್ಥಿಗಳು ಕನಿಷ್ಠ ಶೇ.55 ರಷ್ಟು ಅಂಕಗಳೊಂದಿಗೆ ಅರ್ಹತೆ ಪಡೆದವರು ಜಿ.ಪಿ.ಟಿ ಹುದ್ದೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. |
| 05 | ನಾನು ಬಿ.ಇ ಪದವೀಧರರನಾಗಿದ್ದು, ಬಿ.ಇಡಿ ಮತ್ತು ಟಿ.ಇ.ಟಿ ಅರ್ಹತೆ ಪಡೆದಿಲ್ಲ. ಪ್ರಸ್ತುತ ಕರೆದಿರುವ ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿಗೆ ಅರ್ಜಿ ಸಲ್ಲಿಸಬಹುದೇ? | ಇಲ್ಲ .<br>ಬಿ.ಇ ಪದವಿಯೊಂದಿಗೆ ಬಿ.ಇಡಿ/ಡಿ.ಎಲ್.ಇಡಿ ಮತ್ತು ಟಿ.ಇ.ಟಿ ಪತ್ರಿಕೆ-2ರಲ್ಲಿ ಅರ್ಹತೆ ಪಡೆದಿದ್ದಲ್ಲಿ ಮಾತ್ರ ಅರ್ಜಿ ಸಲ್ಲಿಸಲು ಅರ್ಹತೆ ಪಡೆದಿರುತ್ತಾರೆ. |
| 06 | ನಾನು **ಸಮಾಜಪಾಠಗಳು** ಮತ್ತು **ಆಂಗ್ಲಬಾಷೆ** ಶಿಕ್ಷಕ ಎರಡು ಹುದ್ದೆಗಳಿಗೆ ಅರ್ಹನಾಗಿದ್ದು, ಒಂದು ಹುದ್ದೆಗೆ ಒಂದು ಜಿಲ್ಲೆಯಲ್ಲಿ **ಸಮಾಜ ಪಾಠಗಳು** ಅರ್ಜಿ ಸಲ್ಲಿಸಿ, ಮತ್ತೊಂದು ಜಿಲ್ಲೆಯಲ್ಲಿ ಆಂಗ್ಲಭಾಷಾ ಹುದ್ದೆಗೆ ಅರ್ಜಿ ಸಲ್ಲಿಸಬಹುದೇ? | ಅವಕಾಶ ಇಲ್ಲ.<br>ಎರಡೂ ಹುದ್ದೆಗಳಿಗೆ ಒಂದೇ ಜಿಲ್ಲೆಯಲ್ಲಿ ಪರೀಕ್ಷೆ ಬರೆಯಬೇಕು ಕಾರಣ ಪತ್ರಿಕೆ-1 ರ ಪರೀಕ್ಷೆ ಎರಡೂ ಹುದ್ದೆಗಳಿಗೆ ಒಂದೇ ಆಗಿರುತ್ತದೆ. ಆದ್ದರಿಂದ ಎರಡೂ ಹುದ್ದೆಗಳಿಗೆ ಒಂದೇ ಜಿಲ್ಲೆಯಲ್ಲಿ ಕಡ್ಡಾಯವಾಗಿ ಒಂದೇ ನೊಂದಣಿ ಸಂಖ್ಯೆಯಡಿಯಲ್ಲಿ ಪರೀಕ್ಷೆ ಬರೆಯಬೇಕು. |
| 07 | ಬಿ.ಎ./ಬಿ.ಎಸ್.ಸಿ ಪದವಿಯಲ್ಲಿ ಶಿಕ್ಷಕ ಹುದ್ದೆಗೆ ನಿಗದಿಪಡಿಸಿದ ಐಚ್ಛಿಕ ವಿಷಯವನ್ನು ಕೇವಲ ಎರಡು ವರ್ಷಗಳು ಮಾತ್ರ ಅಧ್ಯಯನ ಮಾಡಿರುತ್ತೇನೆ. ಪ್ರಸ್ತುತ ಶಿಕ್ಷಕ ಹುದ್ದೆಗೆ ಅರ್ಜಿ ಸಲ್ಲಿಸಲು ನನಗೆ ಅರ್ಹತೆ ಇದೆಯೆ? | ಅರ್ಹತೆ ಇರುವುದಿಲ್ಲ ಕಾರಣ ,ಬಿ.ಎ./ಬಿ.ಎಸ್.ಸಿ ಯಲ್ಲಿ ಶಿಕ್ಷಕ ಹುದ್ದೆಗೆ ನಿಗದಿಪಡಿಸಿದ ಐಚ್ಛಿಕ ವಿಷಯವನ್ನು ಪದವಿಯ ಮೂರೂ ವರ್ಷಗಳು ಅಧ್ಯಯನ ಮಾಡಿರಬೇಕು. |

| | | |
|---|---|---|
| 08 | ನಾನು ಜೀವವಿಜ್ಞಾನ ಶಿಕ್ಷಕ ಹುದ್ದೆಯ ಆಕಾಂಕ್ಷಿಯಾಗಿದ್ದು, ಸ್ಪರ್ಧಾತ್ಮಕ ಪರೀಕ್ಷೆ ಪತ್ರಿಕೆ–2 (ವಿಷಯಜ್ಞಾನ) ರಲ್ಲಿ ಗಣಿತ ಮತ್ತು ಭೌತವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಿಬೇಕೆ? | ಈ ಸಂಬಂಧ ಪಠ್ಯಸೂಚಿ, ಮಾದರಿ ಪ್ರಶ್ನೆಪತ್ರಿಕೆ ಮತ್ತು ಪರಾಮರ್ಶನ ಗ್ರಂಥಗಳ ಬಗ್ಗೆ ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗಿದೆ. |
| 09 | ಒಬ್ಬ ಅಭ್ಯರ್ಥಿ ಎಷ್ಟು ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಬಹುದು. | ಒಬ್ಬ ಅಭ್ಯರ್ಥಿಯು ಎಷ್ಟು ಅರ್ಜಿಗಳನ್ನು ಬೇಕಾದರೂ ಸಲ್ಲಿಸಬಹುದು. ಆದರೆ ಒಂದೇ ಜಿಲ್ಲೆಯಲ್ಲಿ ಹಾಗೂ ಒಂದೇ ನೋಂದಣಿ ಸಂಖ್ಯೆಯಲ್ಲಿ ಹುದ್ದೆಗೆ ಸಂಬಂಧಿಸಿದ ಎಲ್ಲಾ ಪತ್ರಿಕೆಗಳ ಪರೀಕ್ಷೆ ಬರೆಯುವುದು ಕಡ್ಡಾಯ. |
| 10 | ಶಿಕ್ಷಕರ ಅರ್ಹತಾ ಪರೀಕ್ಷೆ ಪತ್ರಿಕೆ–1ರಲ್ಲಿ ಅರ್ಹತೆ ಪಡೆದಿರುವವರು ಅರ್ಜಿ ಸಲ್ಲಿಸಬಹುದೇ? | ಶಿಕ್ಷಕರ ಅರ್ಹತಾ ಪರೀಕ್ಷೆ ಪತ್ರಿಕೆ–1 ರಲ್ಲಿ ಅರ್ಹತೆ ಪಡೆದಿರುವವರು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. |
| 11 | ಪದವಿ ಉತ್ತೀರ್ಣ ಪ್ರಮಾಣ ಪತ್ರ (Convocation) ವಿಳಂಬವಾಗಿರುವುದರಿಂದ ಆನ್‌ಲೈನ್ ಅರ್ಜಿಯಲ್ಲಿ ಅಂತಿಮ ಪದವಿಯ ಅಂಕಪಟ್ಟಿಯ ಸಂಖ್ಯೆ ನಮೂದಿಸಬಹುದೇ? | ಪದವಿ ಉತ್ತೀರ್ಣ ಪ್ರಮಾಣ ಪತ್ರ (Convocation) ಇಲ್ಲದಿದ್ದಲ್ಲಿ/ ಪಡೆಯದಿದ್ದಲ್ಲಿ ಸಂಬಂಧಪಟ್ಟ ವಿಶ್ವವಿದ್ಯಾಲಯದಿಂದ Provisional Degree Certificate (PDC) ಅನ್ನು ಪಡೆದಿರಬೇಕು ಹಾಗೂ ಅದರ ಸಂಖ್ಯೆಯನ್ನು ನಮೂದಿಸ ಬೇಕು. |
| 12 | JOC ವ್ಯಾಸಂಗ ಮಾಡಿದ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ನಮೂನೆಯ ಯಾವ ಅಂಕಣದಲ್ಲಿ ವಿವರಗಳನ್ನು ನಮೂದಿಸಬೇಕು? | JOC ವ್ಯಾಸಂಗ ಮಾಡಿದ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ನಮೂನೆಯಲ್ಲಿ ನೀಡಿರುವ 'PUC/JOC ಅಂಕಣದಲ್ಲಿ ವಿವರಗಳನ್ನು ನಮೂದಿಸುವುದು. |
| 13 | ಸ್ಪರ್ಧಾತ್ಮಕ ಪರೀಕ್ಷೆಯ ಪತ್ರಿಕೆ–2 ಅನ್ನು ಯಾವ ಮಾಧ್ಯಮದಲ್ಲಿಯಾದರೂ ಉತ್ತರಿಸಬಹುದೇ? | ಪತ್ರಿಕೆ–2 ರ ವಿವರಣಾತ್ಮಕ ಉತ್ತರಗಳನ್ನು ಅಭ್ಯರ್ಥಿಯು ಆಯ್ಕೆ ಬಯಸುವ ಹುದ್ದೆಯ ಬೋಧನಾ ಮಾಧ್ಯಮದಲ್ಲಿ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸಬೇಕು.ಆದರೆ ಎಲ್ಲಾ ಪ್ರಶ್ನೆಗಳನ್ನು ಒಂದೇ ಭಾಷೆಯಲ್ಲಿ ಉತ್ತರಿಸಬೇಕು. |
| 14 | ಕಲ್ಯಾಣ ಕರ್ನಾಟಕ ಪ್ರದೇಶದ 371(ಜೆ) ಅಭ್ಯರ್ಥಿಗಳು 80% ಮತ್ತು 20% ಎರಡೂ ವೃಂದಗಳಿಗೆ ಆದ್ಯತೆ ನೀಡಿ ಅರ್ಜಿ ಸಲ್ಲಿಸಬಹುದೇ? | ಹೌದು, ಆದ್ಯತೆ ನೀಡಲು ಅವಕಾಶ ನೀಡಿದೆ.<br>80% ಮತ್ತು 20% ಎರಡೂ ವೃಂದಗಳಿಗೆ ಆದ್ಯತೆ ನೀಡಿ ಅರ್ಜಿ ಸಲ್ಲಿಸಬಹುದು. ಆದರೆ ಎರಡೂ ವೃಂದಗಳಿಗೆ ನೇಮಕಾತಿ ಬಯಸುವ ಒಂದೇ ಜಿಲ್ಲೆಯಲ್ಲಿ ಹಾಗೂ ಒಂದೇ ನೋಂದಣಿ ಸಂಖ್ಯೆಯಲ್ಲಿ ನೇಮಕಾತಿ ಪರೀಕ್ಷೆ ಬರೆಯುವುದು ಕಡ್ಡಾಯ. |
| 15 | ಕಲ್ಯಾಣ ಕರ್ನಾಟಕ ಪ್ರದೇಶದ 371(ಜೆ) 07 ಜಿಲ್ಲೆಗಳ ವ್ಯಾಪ್ತಿಗೆ ಸೇರಿದ ಅಭ್ಯರ್ಥಿಗಳು ಕಲ್ಯಾಣ ಕರ್ನಾಟಕೇತರ ಜಿಲ್ಲೆಗಳಿಗೆ ಅರ್ಜಿ ಸಲ್ಲಿಸಬಹುದೇ? | ಸಲ್ಲಿಸಬಹುದು. |

ಹಕ್ಕು ನಿರಾಕರಣೆ:

ಮೇಲ್ಕಾಣಿಸಿದ ಪದೇ ಪದೇ (Frequently asked questions) ಕೇಳಲಾಗುವ ಪ್ರಶ್ನೆಗಳ ಉತ್ತರಗಳು ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡಲು ಅನುಕೂಲಿಸುವ ಸಲುವಾಗಿ ಮಾತ್ರ, ಎಲ್ಲವೂ ನೇಮಕಾತಿಯ ನಿಯಮಗಳಿಗೆ ಒಳಪಟ್ಟಿರುತ್ತದೆ.